## 12ನೆಯ ಶತಮಾನದ ಪಾದರಕ್ಷೆ

ಹರಳಯ್ಯನವರು ಬಸವಣ್ಣನವರಿಗೆ ಶರಣು ಅಪ್ಪ ಎನ್ನುತ್ತಾರೆ. ಅದಕ್ಕೆ ಪ್ರತಿಯಾಗಿ ಬಸವಣ್ಣನವರು ಎರಡೂ ಕೈ ಜೋಡಿಸಿ ಶರಣರಿಗೆ ಶರಣು ಶರಣಾರ್ಥಿ ಎನ್ನುತ್ತಾರೆ. 'ಬಸವಣ್ಣನವರು ಮಾಡಿದ್ದು ನನಗಿಂತ ಹೆಚ್ಚು ತೂಕದ್ದಾಯಿತು' ಎಂದು ಮಡದಿ ಕಲ್ಯಾಣಮ್ಮನವರಿಗೆ ಹರಳಯ್ಯ ಹೇಳುತ್ತಾರೆ. ಆಗ 'ಇದಕ್ಕೆ ಸಮನಾಗಿ ನನ್ನ ಎಡ ತೊಡೆಯ ಹಾಗೂ ನಿಮ್ಮ ಬಲತೊಡೆಯ ಚರ್ಮ ತೆಗೆದು ಬಸವಣ್ಣನವರಿಗೆ ಪಾದರಕ್ಷೆ ಮಾಡಿಕೊಡೋಣ' ಎಂದು ಪತ್ನಿ ಸಲಹೆ ನೀಡುತ್ತಾಳೆ. ಇದಕ್ಕೆ ಸಮ್ಮತಿಸಿದ ಸಮಗಾರ ಹರಳಯ್ಯ ಹಾಗೆಯೇ ಮಾಡುತ್ತಾರೆ. ಆಗ ಬಸವಣ್ಣನವರು 'ಇವು ನನಗೆ ಸಲ್ಲುವುದಲ್ಲ. ಕೂಡಲ ಸಂಗಯ್ಯನಿಗೆ ಸಲ್ಲುತ್ತದೆ' ಎಂದರಂತೆ. ಹನ್ನೆರಡನೆ ಶತಮಾನದ ಆ ಮೂಲ ಪಾದರಕ್ಷೆಗಳು ಈಗಲೂ ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಬಿಜನಳ್ಳಿಯಲ್ಲಿ ನೋಡಬಹುದು.

**ಚಿತ್ರ- ಬರಹ: ಮನೀಷಾ ಪಾಟೀಲ, ವಿಜಯಪುರ**





## ಕನ್ನಡದ ಅಭಿಮಾನಿ

ಎಂ.ಡಿ. ಅಲ್ಲಾಸ ಈ ಚಿತ್ರದಲ್ಲಿರುವ ವ್ಯಕ್ತಿಯ ಹೆಸರು. ಅಪ್ಪಟ ಕನ್ನಡ ಅಭಿಮಾನಿ. ರಾಜ್ಯದಲ್ಲಿ ಎಲ್ಲೇ ಸಾಹಿತ್ಯ ಸಮ್ಮೇಳನ ನಡೆಯಲಿ ಅಲ್ಲಿ ಇವರು ಹಾಜರು. ಯಾವುದೇ ಸಮ್ಮೇಳನಕ್ಕೆ ಹೋದರೂ ಕನ್ನಡ ಬಾವುಟ ಹೊಂದಿದ ಬಟ್ಟೆಯನ್ನು ಹಾಕಿಕೊಂಡು ಬರುವರು ಹಾಗೂ ಜೊತೆಗೆ ತಾಯಿ ಭುವನೇಶ್ವರಿ ಭಾವಚಿತ್ರವನ್ನು ಕೈಯಲ್ಲಿ ಹಿಡಿದುಕೊಂಡು ಸಮ್ಮೇಳನಾಧ್ಯಕ್ಷರ ನುಡಿಗಳನ್ನು ಕೇಳಲು ಕುಳಿತುಕೊಳ್ಳುವರು. ಸಮ್ಮೇಳನಕ್ಕೆ ಇವರ ಹಾಗೆ ಕನ್ನಡ ಬಾವುಟ ಹೊಂದಿದ ಬಟ್ಟೆಯನ್ನು ಹಾಕಿಕೊಂಡು ಬರುವವರು ವಿರಳ. ಈ ರೀತಿ ಫೋಸ್ ಕೊಟ್ಟದ್ದು ಮೊನ್ನೆ ನಡೆದ ರಾಯಚೂರಿನ ಸಮ್ಮೇಳನದಲ್ಲಿ.

**-ಜಗದೀಶ ಎಂ., ಸಂಗಣ್ಣವರ, ಬೈಲಹೊಂಗಲ**

## ನಗರೇಶ್ವರ ದೇವಸ್ಥಾನ

ರಾಯಚೂರಿನ ಹತ್ತು ಹಲವು ವೈಶಿಷ್ಟ್ಯಗಳಿಗೆ ಮತ್ತೊಂದು ಸೇರ್ಪಡೆಯಾಗಿದೆ. ನಗರದ ನೇತಾಜಿ ನಗರದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ನಗರೇಶ್ವರ ದೇವಸ್ಥಾನ. ಸುಮಾರು 150 ವರ್ಷಗಳ ಇತಿಹಾಸವಿದೆ. ಇದೀಗ 4 ಕೋಟಿ ರೂ. ವೆಚ್ಚದಲ್ಲಿ ನವೀಕೃತಗೊಂಡು ಎಲ್ಲರನ್ನೂ ಆಕರ್ಷಿಸುತ್ತಿದೆ. ರಥದ ಮಾದರಿಯ ನವ್ರಗಹ ದೇಗುಲ, ಮತ್ತೊಂದು ರಥದಲ್ಲಿ ಅಷ್ಟಮೂರ್ತಿ ವಿನಾಯಕ, ಈ ರಥದ ಸುತ್ತ ವಿಶ್ವರೂಪ ದರ್ಶನ, ಸಮುದ್ರ ಮಥನ, ರಾಘವೇಂದ್ರ ಸ್ವಾಮಿ, ಶ್ರೀನಿವಾಸ ಕಲ್ಯಾಣದ ಉಬ್ಬು ಶಿಲ್ಪಗಳನ್ನು ಸುಂದರವಾಗಿ ನಿರ್ಮಿಸಲಾಗಿದೆ. ಇಷ್ಟೇ ಅಲ್ಲದೆ ಶಿವಲಿಂಗದ ಮೇಲೆ ಜಲಾಭಿಷೇಕ ಮಾಡುತ್ತಿರುವ ಮಾರುತಿ, ಸೋಮನಾಥ, ಕೇದಾರ, ನಾಗೇಶ್ವರ, ಭೀಮಾಶಂಕರ, ಓಂಕಾರೇಶ್ವರ, ಪರ್ಲಿ ವೈದ್ಯನಾಥ, ಮಹಾ ಕಾಳೇಶ್ವರ, ಘೃಷ್ಣೇಶ್ವರ, ತ್ರಯಂಬಕೇಶ್ವರ, ದ್ವಾದಶ ಜ್ಯೋತಿರ್ಲಿಂಗಗಳ ದೇವಾಲಯಗಳ ಮಾದರಿಗಳನ್ನು ಕಾಣಬಹುದು. ವಾಸವಿ ದೇವಿ ಚರಿತ್ರೆ ಮತ್ತು ದಶಾವತಾರದ ಶಿಲ್ಪಗಳಿವೆ.

ಇದರ ಎತ್ತರ 40 ಅಡಿ. ದೇಗುಲದ ರಾಜಗೋಪುರ 45 ಅಡಿ ಎತ್ತರವಿದೆ. ಶಿವನ ಜಟೆಯಿಂದ ನೀರನ್ನು ಹರಿಸಲಾಗಿದ್ದು, ಗಂಗೋತ್ರಿಯ ದೇಗುಲದ ಪ್ರತಿರೂಪ ಇದಾಗಿದೆ. ಸತತವಾಗಿ 8 ವರ್ಷಗಳಿಂದ ಈ ನಗರೇಶ್ವರ ದೇವಾಲಯ ನವೀಕರಣಕ್ಕೆ ಒಳಗಾಗಿ ದರ್ಶನಕ್ಕೆ ಮುಕ್ತವಾಗಿದೆ. ದೇವಾಲಯ ಮರು ನಿರ್ಮಾಣ ಮಾಡುವುದಕ್ಕಿಂತ ಮುಂಚೆ ರಾಜ್ಯ ಮತ್ತು ಹೊರ ರಾಜ್ಯಗಳ 10ಕ್ಕೂ ಹೆಚ್ಚು ದೇವಾಲಯಗಳನ್ನು ನೋಡಿ ಅಲ್ಲಿನ ಮಾದರಿಗಳನ್ನು ಇಲ್ಲಿ ಅಳವಡಿಸಲಾಗಿದೆ.

**-ಈರಣ್ಣ ಬೆಂಗಾಲಿ, ರಾಯಚೂರು**

